ಶ್ರೀ ಎಸ್.ಎಫ್. ಭೈರಿ.—ಕಳೆದ ಹತ್ತು ವರ್ಷಗಳಿಂದ ಈ ಶಾಲಾ ಕಟ್ಟಡಗಳನ್ನು ಪೂರ್ಣಗೊಳಿಸದೆ ಹಾಗೆಯೇ ಬಿಟ್ಟಿರಲು ಕಾರಣವೇನು ?

†ಶ್ರೀ ಬಿ. ಸುಬ್ಬಯ್ಯಶೆಟ್ಟಿ.—ಮಾನ್ಯ ಅಧ್ಯಕ್ಷರೇ, ಆಲ್ಲಿ ೨೧ ಶಾಲಾ ಕಟ್ಟಡಗಳ ಕೆಲಸ ತೆಗೆದುಕೊಳ್ಳಲಾಗಿತ್ತು. ಆದರಲ್ಲಿ ೯ ಶಾಲಾ ಕಟ್ಟಡಗಳ ಕೆಲಸವನ್ನು ಪೂರ್ತಿ ಮಾಡಲಾಗಿದೆ. ಇನ್ನು ೧೨ ಶಾಲಾ ಕಟ್ಟಡಗಳ ಕೆಲಸ ಬೇರೆ ಬೇರೆ ಹಂತದಲ್ಲಿದೆ, ೧೯೭೮-೭೯ರಲ್ಲಿ ಪ್ರೈಮರಿ ಶಾಲಾ ಕಟ್ಟಡಗಳಿಗಾಗಿ ೯೭ ಲಕ್ಷದ ೩೦ ಸಾವಿರ ರೂ.ಗಳನ್ನು ಕೊಟ್ಟಿತ್ತು. ಇದನ್ನು ಬೇರೆಬೇರೆ ಜಿಲ್ಲೆಗಳಿಗೆ ಹಂಚಲಾಗಿತ್ತು. ಇದರ ಪ್ರಕಾರ ಗುಲ್ಬರ್ಗ ಜಿಲ್ಲೆಗೆ ೩ ಲಕ್ಷದ ೯೧ ಸಾವಿರದ ೫೦೦ ರೂ.ಗಳನ್ನು ಕೊಡಲಾಗಿತ್ತು. ಇದನ್ನು ಅಲ್ಲಿಯ ಎಲ್ಲಾ ತಾಲ್ಲೂಕುಗಳಿಗೂ ಹಂಚಿಕೊಟ್ಟಿದ್ದರಿಂದ ಈ ಭಾಗದಲ್ಲಿ ಎಲ್ಲ ಕೆಲಸಗಳನ್ನು ಪೂರ್ತಿ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಈ ವರ್ಷದಲ್ಲಿ ಪೂರ್ತಿ ಮಾಡಲು ನಾವು ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ.ವಿ. ಕಕ್ಕಿಲಾಯ.—ಕಳೆದ ಹತ್ತು ವರ್ಷಗಳಿಂದ ಈ ಕೆಲಸವನ್ನು ಪೂರ್ತಿ ಮಾಡದಿರುವ ಕಾರಣ, ಅರ್ಧ ಕಟ್ಟಿರುವ ಗೋಡೆಗಳು ಬಿದ್ದು ಹೋಗಿ ಸರ್ಕಾರಕ್ಕೆ ನಷ್ಟವಾಗಬಹುದು. ಆದಕಾರಣ ಅರ್ಧವಾಗಿರುವ ಕೆಲಸಗಳನ್ನು ಮೊದಲು ಮುಗಿಸಬೇಕೆಂದು ಆದೇಶ ಕೊಡುತ್ತೀರಾ? ಮತ್ತು ಇಲ್ಲಿ (ಅ)ಮತ್ತು (ಇ) ಪ್ರಶ್ನೆಗಳಿಗೆ ಕೊಟ್ಟಿರುವ ಉತ್ತರಗಳನ್ನು ನೋಡಿದರೆ ಈ ವರ್ಷವೇ ಈ ಕೆಲಸವನ್ನು ಮಾಡಿ ಮುಗಿಸುವ ಸೂಚನೆ ಕಂಡುಬರುತ್ತಿಲ್ಲ. ಈಗಲಾದರೂ ಅರ್ಧವಾಗಿರುವ ಕೆಲಸವನ್ನು ಮುಗಿಸಬೇಕೆಂದು ಆದೇಶ ಕೊಡುತ್ತೀರಾ ?

ಶ್ರೀ ಬಿ. ಸುಬ್ಬಯ್ಯಶೆಟ್ಟಿ.—ಆದಕ್ಕಾಗಿಯೇ ತಾಲ್ಲೂಕ್ ಡೆವಲಪ್‌ಮೆಂಟ್ ಬೋರ್ಡಿನವರಿಗೆ ಹಣ ಕೊಡುವಾಗ ಪೂರ್ತಿಯಾಗದಿರುವ ಕಟ್ಟಡಗಳ ಕೆಲಸವನ್ನು ಮೊದಲು ಪೂರ್ತಿ ಮಾಡಬೇಕೆಂದು ಆದೇಶ ಕೊಡುವವರಿದ್ದೇವೆ.

Amount Spent on Slum Clearance

507 SRI T.R. SHAMANNA (Basavanagudi)—Will the Minister for Municipal Administra ion be pleased to state.—

(a) the amount spent by the Slum Clearance Board during the last three years on slum Clearance;

(b) (i) the amount spent to clear or improve slums in Bangalore City ;

(ii) the amount spent on establishment charges including the Chairman's establishment, of slum Clearance Board;

(c) the number of slums that were in Bangalore City before the Slum Board was formed and the number of slums now existing ;

(d) number of slums cleared or improved by the Slum Clearance Board ?

SRI H.C. SRIKANTAIAH.—(Minister for Municipal Administration.)

(a) Rs. 20, 01, 402-58

(b) Rs. 44, 651.00 (upto end of 1977-78),
Rs. 11, 53, 541.25

(c) No. of identified slums before the formation of the Board.	Total No. of Slums identified in Bangalore City as on 31-12-1978.
180	306

(d) Eight (upto the end of 1977–78)

ಶ್ರೀ ಟಿ.ಆರ್. ಶಾಮಣ್ಣ.—ಈಗ ಹೊಲಿ ಇರತಕ್ಕಂಥ ಕೊಳಚೆ ಪ್ರದೇಶಗಳನ್ನೆಲ್ಲಾ ಕ್ಲಿಯರ್ ಪಡಿಸುವುದಕ್ಕೆ ಬಹಳ ಹಣ ಬೇಕಾಗುತ್ತದೆಂಬ ಬಗ್ಗೆ ಅಂದಾಜು ಮಾಡಿಸುತ್ತೀರಾ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಅಂದಾಜು ಮಾಡಿಸಿಲ್ಲ.

ಶ್ರೀ ಟಿ.ಆರ್. ಶಾಮಣ್ಣ.—ಈ ಕೊಳಚೆ ನಿರ್ಮೂಲನಾ ಮಂಡಲಿ ಸ್ಥಾಪನೆಯಾಗಿ ೫-೪ ವರ್ಷಗಳಾಯಿತು ಅಲ್ಲಿ ಇಲ್ಲಿಯವರೆಗೆ ೨೮ ಲಕ್ಷ ರೂ.ಗಳನ್ನು ವಿರ್ಚು ಮಾಡಿದೆ. ಇದರಲ್ಲಿ ಮಿಸ್ಕಾಬ್ಲಿಷ್ ಮೆಂಟಿಗೆ ೧೧ ಲಕ್ಷ ಚಿಲ್ಲರೆ ವಿರ್ಚಾಗಿದೆ. ಅಂದರೆ ಕಳೆದ ೩ ವರ್ಷಗಳಲ್ಲಿ ಕೊಳಚೆ ನಿರ್ಮೂಲನಕ್ಕಾಗಿ ೯ ಲಕ್ಷ ರೂ.ಗಳನ್ನು ವಿರ್ಚು ಮಾಡಲಾಗಿದೆ ಜೊತೆಗೆ ಈ ಮಂಡಲಿ ರಚನೆಯಾಗುವುದಕ್ಕೆ ಮೊದಲು ೧೮೦ ಕೊಳಚೆ ಪ್ರದೇಶಗಳಿದ್ದವು, ಇದು ರಚನೆಯಾದ ಮೇಲೆ ಇವುಗಳ ಸಂಖ್ಯೆ ೨೦೬ಕ್ಕೆ ಹೆಚ್ಚಿದೆ. ಮೂರು ವರ್ಷಗಳಲ್ಲಿ ಕೇವಲ ೯ ಲಕ್ಷ ರೂ.ಗಳನ್ನು ವಿರ್ಚು ಮಾಡಲಾಗಿದೆ. ಈ ರೀತಿ ವಿರ್ಚು ಮಾಡಿದರೆ ೨೦೬ ಸ್ಲಮ್‌ಗಳನ್ನು ಜಾಗ್ರತೆ ಕ್ಲಿಯರ್ ಮಾಡಲು ಸಾಧ್ಯವೇ?

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಸ್ಲಮ್ ಕ್ಲಿಯರೆನ್ಸ್‌ಗೆ ಈ ಮಂಡಲಿಗೆ ಸರ್ಕಾರ ಹಣ ಕೊಟ್ಟಿರುವುದರ ಜೊತೆಗೆ, ಮೈಸೂರು ನಗರ ಕಾರ್ಪೊರೇಷನ್, ಬೆಂಗಳೂರು ನಗರ ಕಾರ್ಪೊರೇಷನ್, ಮುಬ್ಲಿಳ್ಳಿ–ಧಾರವಾಡ ಕಾರ್ಪೊರೇಷನ್‌ಗಳಿಗೂ ಸರ್ಕಾರ ಹಣ ಕೊಟ್ಟಿದೆ. ಆದ್ದರಿಂದ ಕೇವಲ ೯ ಲಕ್ಷ ರೂಪಾಯಿ ಸ್ಲಂ ಬೇಳುವುದು ಸರಿಯಾದುದಲ್ಲ. ಇಲ್ಲಿ ಸಾಕಷ್ಟು ಹಣ ವಿರ್ಚು ಮಾಡಿಲ್ಲ ಎಂಬುದು ನಿಜ. ಇದಕ್ಕೆ ಕೆಲ ತಾಂತ್ರಿಕ ತೊಂದರೆಗಳನ್ನು ವಿರ್ಚು ಮಾಡ ಬೇಕಾಗಿದೆ. ಆದ್ದರಿಂದ ಈ ಬಗ್ಗೆ ಮಷ್ಟು ಕೆಲವಾರು ಬೇಕಾಗಿತ್ತೆಂಬ ಅಷ್ಟು ಆಗಲ್ಲವೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ತಮಗೆ ಗೊತ್ತಿರುವಂತೆ ಹಿಂದೂ ಕೊಟಿ ರೂಪಾಯಿಗಳನ್ನು ಈ ವರ್ಷ ಇದಕ್ಕೆ ಒದಗಿಸಿದ್ದೇವೆ. ಇದರ ಜೊತೆಗೆ ಬೆಂಗಳೂರು ನಗರ ಕಾರ್ಪೊರೇಷನ್‌ಗೆ ೨೫ ಲಕ್ಷ ರೂ.ಗಳನ್ನು ಮತ್ತು ಬಿ.ಡಿ.ಎ ಗೆ ೨೫ ಲಕ್ಷ ರೂ.ಗಳನ್ನು ಒದಗಿಸಿದೆ.

ಶ್ರೀ ಕೆ. ಎಚ್., ಪಾಟೀಲ್.—ಕೊಳಚೆ ಪ್ರದೇಶಗಳ ನಿರ್ಮೂಲನಕ್ಕಾಗಿ ಕೋಟ್ಯಾಂತರ ರೂಪಾಯಿಗಳನ್ನು ವಿರ್ಚು ಮಾಡುತ್ತಿರುವುದು ಸಂತೋಷದ ಸಂಗತಿ. ಆದರೆ ಹೊಸದಾಗಿ ಕೊಳಚೆ ಪ್ರದೇಶಗಳು ಹುಟ್ಟಿಕೊಳ್ಳದಂತೆ ನೋಡಿಕೊಳ್ಳಲು ಏನು ಕ್ರಮ ತೆಗೆದುಕೊಂಡಿದ್ದೀರಾ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಮಾನ್ಯ ಶಾಮಣ್ಣನವರು ಹೇಳಿದಂತೆ ಈ ಬೋರ್ಡ್ ರಚನೆಯಾದಮೇಲೆ ಇವುಗಳ ಸಂಖ್ಯೆ ಜಾಸ್ತಿಯಾಗಿದೆ. ಇವರ ರಚನೆಯಿಂದ ಸಮಸ್ಯೆಲ್ಲಾ ಪರಿಹಾರ ಸಿಗತ್ತದೆ. ಮನೆಗಳನ್ನು ಕಟ್ಟಿ ಸಿಕೊಡುತ್ತಾರೆ, ಸೈಟು ಕೊಡುತ್ತಾರೆಂಬ ದೃಷ್ಟಿಕ್ಷೆ ಮೇಲೆ ಈ ಸ್ಲಮ್‌ಗಳು ಜಾಸ್ತಿಯಾಗಿವೆ. ನಾನು ನನ್ನ ಇಲಾಖೆಯ ಬೇಡಿಕೆಯ ಮೇಲೆ ಉತ್ತರ ಕೊಡುವಾಗ ಈ ವಿಚಾರದಲ್ಲಿ ಕಟ್ಟುನಿಟ್ಟಾದ ಕಾನೂನು ತರುತ್ತೇವೆಂದು ಹೇಳಿದ್ದೇನೆ. ಈಗಾಗಲೇ ಅದು ತಯಾರಾಗುತ್ತಿದೆ. ಅದನ್ನು ಈ ಸಭೆಯ ಮುಂದೆ ತಂದು ತಮ್ಮ ಆಸುಮೋದನೆಯನ್ನು ಪಡೆಯುತ್ತೇನೆ.

SRI A. LAKSHMISAGAR.—Is it under the consideration of the Government that another Slum Clearance Board would be established for clearing the slums?

SRI H.C. SRIKANTAIAH.—No Sir.

SRI P.K. RANGANATHAN.—Just now the Hon.Minister has stated that there is a Slum Clearance Board. Is it a Slum Clearance Board or Slum Creating Board !

SRI H.C. SRIKANTAIAH.—whether it is Slum Clearence Board or Slum Creation Board. it is left to the hon.Member to have his views But I would like to tell that the Slum Clearance Board will never create slums; But some of our friends create slums.

ಶ್ರೀ ಪಂಪಾಪತಿ —ಸ್ವಾಮಿ, ದಾವಣಗೆರೆಯಲ್ಲಿ ಈ ಕೊಳಚೆ ನಿರ್ಮೂಲನಾ ಮಂಡಲಿ ಸ್ಥಾಪನೆಯಾದ ಮೇಲೆ ಒಂದು ಕೊಳಚೆ ಪ್ರದೇಶವನ್ನು ನಿರ್ಮೂಲನ ಮಾಡಿದೆ. ನಂತರ ಅನೇಕ ಕೊಳಚೆ ಪ್ರದೇಶಗಳನ್ನು ನಿರ್ಮೂಲನವಾಗಿವೆ. ಕೊಳಚೆ ನಿರ್ಮೂಲನ ಮಂಡಲಿಯವರು ನಿಧಾನವಾಗಿ ಕೆಲಸ ಮಾಡಿದರೆ ಕೊಳಚೆ ಪ್ರದೇಶಗಳನ್ನು ನಿರ್ಮೂಲನ ಮಾಡುವುದಕ್ಕೆ ಸಾಧ್ಯವಿಲ್ಲ. ಇನ್ನೂ ಸ್ವಲ್ಪ ಹೆಚ್ಚಿನ ಹಣವನ್ನು ಅದಕ್ಕೆ ಒದಗಿಸಿ ಸಹಾಯ ಮಾಡಿ ಕೊಳಚೆ ನಿರ್ಮೂಲನ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಕೊಳಚೆ ನಿರ್ಮೂಲನಾ ಮಂಡಲಿ ಇರುವುದರಿಂದ ಕೊಳಚೆ ಪ್ರದೇಶಗಳು ಹೆಚ್ಚಾಗಿವೆ ಎಂದು ಹೇಳತಕ್ಕದ್ದು ಸರಿಯಲ್ಲ. ವಸತಿಹೀನರು ಹೆಚ್ಚು ಇರುವುದರಿಂದ ಕೊಳಚೆ ಪ್ರದೇಶಗಳು ಹೆಚ್ಚಾಗುತ್ತಾ ಇವೆ. ಆದುದರಿಂದ ದಾವಣಗೆರೆಯಲ್ಲಿ ೨೦ ಕೊಳಚೆ ಪ್ರದೇಶಗಳು ಇವೆ. ದಾವಣಗೆರೆಯಲ್ಲಿ ಒಂದು ಕೊಳಚೆ ಪ್ರದೇಶದಲ್ಲಿದ್ದ ೧೨೦ ಗುಡಿಸಲುಗಳು ಸುಟ್ಟುಹೋಗಿವೆ ಆ ಸುಟ್ಟುಹೋದ ಗುಡಿಸಲುಗಳವರು ನಿರ್ಗತಿಕರಾಗಿದ್ದಾರೆ. ಆದ್ದರಿಂದ ಕೊಳಚೆ ನಿರ್ಮೂಲನ ಮಂಡಲಿಯವರು ಅವರಿಗೆ ಏನಾದರೂ ಸಹಾಯವನ್ನು ಒದಗಿಸುತ್ತಾರೆಯೆ?

ಶ್ರೀ ಎಚ್. ಸಿ. ಶ್ರೀಕಂಠಯ್ಯ:—ಕೊಳಚೆ ನಿರ್ಮೂಲನ ಮಂಡಲಿಯವರು ಯಾವ ಕೊಳಚೇ ಪ್ರದೇಶವನ್ನು ರೆಕಗ್‌ನೈಸ್ ಮಾಡಿದ್ದಾರೆ ಅದನ್ನು ಕೊಳಚೆ ನಿರ್ಮೂಲನಾ ಮಂಡಲಿಯ ವಶಕ್ಕೆ ತೆಗೆದು ಕೊಂಡಿದ್ದರೆ ಏನಾದರೂ ಪರಿಹಾರವನ್ನು ಕೊಡಿಸುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ:—ಮಾನ್ಯ ಮಂತ್ರಿಗಳ ಅಧಿಯಲ್ಲಿ ಬಹಳ ಕೊಳಚೆ ಪ್ರದೇಶಗಳು ಹೆಚ್ಚಾಗಿವೆ. ಆದ್ದರಿಂದ ಈ ಮಂತ್ರಿಗಳನ್ನು ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಮಂತ್ರಿಗಳು ಎನ್ನುವುದಕ್ಕೆ ಬದಲಾಗಿ ಸ್ಲಮ್ಸ್ ಮಂತ್ರಿಗಳು ಎಂದು ಕರೆದರೆ ಒಳ್ಳೆಯದಾಗುತ್ತದೆಯಲ್ಲವೆ?

ಶ್ರೀ ಬೆಟ್ಟಸ್ವಾಮಿಗೌಡ.—ಈ ಎಲ್ಲಾ ಸ್ಲಮ್‌ಗಳನ್ನು ಯಾವಾಗ ತಾವು ಕ್ಲಿಯರ್ ಮಾಡುತ್ತೀರಾ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.— ನಮ್ಮ ಮತ್ತು ನಿಮ್ಮ ಸ್ಲಮ್‌ಗಳನ್ನು ಕ್ಲಿಯರ್ ಮಾಡುವುದಕ್ಕೆ ನಿರ್ದಿಷ್ಟವಾದ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಿದ್ದೇವೆ.

ಶ್ರೀ ಎಮ್. ಚಿಂದ್ರಶೇಖರ್.— ನಮ್ಮ ರಾಜ್ಯದಲ್ಲಿರತಕ್ಕ ೩೦೬ ಸ್ಲಮ್‌ಗಳಲ್ಲಿ ಎಷ್ಟು ಸ್ಲಮ್‌ಗಳು ಕೊಳಚೆ ನಿರ್ಮೂಲನಾ ಮಂಡಲಿಯ ಆಡಳಿತಕ್ಕೆ ಬಂದಿವೆ. ಇವುಗಳಲ್ಲಿ ಈಗಾಗಲೇ ೮ ಸ್ಲಮ್ ಕ್ಲಿಯರ್ ಆಗಿವೆ ಎಂದು ಹೇಳುತ್ತೀರಿ. ಅವು ಯಾವುವು?

ಶ್ರೀ ಎಚ್. ಸಿ. ಶ್ರೀಕಂಠಯ್ಯ:—ಮಂಡ್ಯದಲ್ಲಿ ೪, ಗದಗ್‌ಬೆಟಗೇರಿಯಲ್ಲಿ ೩, ಹಾಗೂ ಶಿವಮೊಗ್ಗಾದಲ್ಲಿ ೩.

ಶ್ರೀ ಭೀಮಣ್ಣ ಖಂಡ್ರೆ.—ಈ ವರ್ಷ ೨೦ ಲಕ್ಷ ರೂಪಾಯಿಗಳನ್ನು ಇದಕ್ಕೆ ಖರ್ಚುಮಾಡಿದ್ದೀರಿ. ಇದರಲ್ಲಿ ಸಿಬ್ಬಂದಿಗಾಗಿ ೧೧,೫೩,೫೪೧ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆಂದು ಹೇಳಿದ್ದೀರಿ. ಈ ಪ್ರಕಾರ ಸಿಬ್ಬಂದಿಗೆ ಹಣವನ್ನು ಖರ್ಚುಮಾಡಿದರೆ ಸ್ಲಮ್ ಕ್ಲಿಯರೆನ್ಸ್ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ? ಇದಕ್ಕೆ ಹಣವನ್ನು ಒದಗಿಸಿ ಹೆಚ್ಚು ಕೆಲಸ ಮಾಡುವಂತಹ ಒಂದು ಅವಕಾಶವನ್ನು ಕಲ್ಪಿಸಬೇಕು. ಈ ಸ್ಲಮ್ ಕ್ಲಿಯರೆನ್ಸ್ ಮಾಡುವ ಬಗ್ಗೆ ಸರ್ಕಾರದ ನೀತಿ ಏನು? ಇಷ್ಟು ಹಣ ಖರ್ಚು ಮಾಡಿದರೆ ಇಷ್ಟು ಕೆಲಸ ಆಗಬೇಕು ಎನ್ನುವ ನಿಯಮವೇನಾದರೂ ಇದೆಯೆ?

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಸ್ಲಮ್ ಕ್ಲಿಯರೆನ್ಸ್ ಬೋರ್ಡು ಹುಬ್ಬಳ್ಳಿ, ಧಾರವಾಡ, ಬೆಂಗಳೂರು ಮತ್ತು ಮೈಸೂರು ಈ ಪ್ರದೇಶದಲ್ಲಿ ಸ್ಲಮ್ ಕ್ಲಿಯರ್ ಮಾಡುವುದಕ್ಕಾಗಿ ೨೦ ಲಕ್ಷ ರೂಪಾಯಿಯನ್ನು ಖರ್ಚು ಮಾಡಿದ್ದಾರೆ. ಈ ಕಾರ್ಯಕ್ರಮಕ್ಕೆ ಬೆಂಗಳೂರು ನಗರ ಕಾರ್ಪೊರೇಷನ್, ಮೈಸೂರು,ಹುಬ್ಬಳ್ಳಿ ಧಾರವಾಡ ಕಾರ್ಪೊರೆಷನ್ ಅವರಿಂದ ಹಣ ಬೋರ್ಡಿನವರ ಮುಖಾಂತರಹೋಗಿದೆ

ಶ್ರೀ ಟಿ.ಆರ್. ಶಾಮಣ್ಣ.—ಈ ಕೊಳಚೇ ಪ್ರದೇಶಗಳು ಒಂದು ಕ್ಯಾನ್ಸರ್ ಇದ್ದಹಾಗೆ. ಇದನ್ನು ಸರಿಪಡಿಸದಿದ್ದರೆ ಬೆಂಗಳೂರು ನಗರಕ್ಕೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಇದರ ಬಗ್ಗೆ ದಯವಿಟ್ಟು ಒಂದು ಫೇಸ್ಡ್ ಪ್ರೋಗ್ರಾಮ್ ಹಾಕಿಕೊಂಡು ಅದಕ್ಕೆ ಸಾಕಷ್ಟು ಹಣವನ್ನು ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದವರಿಂದ ಒದಗಿಸಿಕೊಂಡು ಕೊಳಚೆ ಪ್ರದೇಶಗಳನ್ನು ನಿರ್ಮೂಲನ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಈಗಾಗಲೇ ಸ್ಲಮ್ ಬಾರದಹಾಗೆ ಕಾನೂನು ತರುತ್ತಿದ್ದೇವೆ ಸ್ಲಮ್ ಕ್ಲಿಯರೆನ್ಸ್‌ಬೋರ್ಡಿನವರೂ ಸಹಾ ಈ ಬಗ್ಗೆ ಒಂದು ಪ್ರಪೋಸಲ್‌ನ್ನು ತಯಾರು ಮಾಡಿ ಕೆಲವು ಕಳುಹಿಸಿದ್ದಾರೆ. ಇದಕ್ಕೆ ಕೇಂದ್ರ ಸರ್ಕಾರದವರೂ ಸಹಾ ಸಾಕಷ್ಟು ಹಣವನ್ನು ಕೊಡುತ್ತೇವೆಂದು ಹೇಳಿದ್ದಾರೆ ಮುಂದೆ ನಮ್ಮ ಸರ್ಕಾರದವರೂ ಸಹಾ ಇದಕ್ಕಾಗಿ ಹೆಚ್ಚಿಗೆ ಹಣವನ್ನು ವಿನಿಯೋಗಿಸಲಾಗಿಡಬೇಕು. ಸ್ಲಮ್. ಕ್ಲಿಯರೆನ್ಸ್ ಮಾಡುವುದಕ್ಕೆ ಒಂದು ಕಾರ್ಯಕ್ರಮವನ್ನು ಆದಷ್ಟು ಜಾಗ್ರತೆ ಹಾಕಿಕೊಳ್ಳುತ್ತೇವೆ.

Formation of Seed Corporation for the Preparation of layings by the Sericulturists in the State

594 SRI M.C. BASAPPA (Chamarajanagar).—Will the Minister for Sericulture and Horticulture be pleased to state.

(a) whether there was a proposal before Government to have a Seed Corporation for the preparation of layings for the Sericultuists in the State;

(b) if so, progress achieved in this direction so far?

SRI K.B. SHIVAIAH.—Minister for Sericulture and Horticulture

(a) Yes.

(b) Not yet finalised.

ಶ್ರೀ ಎಂ. ಸಿ. ಬಸಪ್ಪ.—ಸ್ವಾಮಿ, ರೇಷ್ಮೆ ಬಿತ್ತನೆ ತಯಾರಿಕೆಯಲ್ಲಿ ಖಾಸಗಿಯವರೂ ಇದ್ದಾರೆ. ಕರ್ನಾಟಕ ಸರ್ಕಾರದ ರೇಷ್ಮೆ ಇಲಾಖೆಯವರೂ ತಯಾರು ಮಾಡುತ್ತಾರೆ. ಜೊತೆಗೆ ಕೇಂದ್ರ ಸರ್ಕಾರದ ರೇಷ್ಮೆ ಮಂಡಲಿಯವರೂ ಕೂಡ ಈ ಕಸುಬನ್ನು ಮಾಡುತ್ತಿದ್ದಾರೆ. ಇದಕ್ಕೆ ಒಂದು ಸಂಸ್ಥೆ ಮಾಡಬೇಕೆನ್ನುವುದು ಇನ್ನೂ ಅಂತಿಮ ತೀರ್ಮಾನ ಆಗಿಲ್ಲ. ಇದು ಸರ್ಕಾರದ ಆಲೋಚನೆಯಲ್ಲಿದೆ ಎಂದು ಹೇಳಿದ್ದೀರಿ. ಈ ಮೂರು ಘಟಕಗಳನ್ನು ಒಂದು ಸಂಸ್ಥೆ, ಮಾಡುತ್ತೀರಾ ಅಥವಾ ಸರ್ಕಾರದವರೇ ನಡೆಸತಕ್ಕ ಒಂದು ಸಂಸ್ಥೆಯನ್ನು ಮಾಡುತ್ತೀರ?

ಶ್ರೀ ಕೆ. ಬಿ. ಶಿವಯ್ಯ.—ಇದಕ್ಕೆ ಒಂದು ಕಾರ್ಪೊರೇಷನ್ ಮಾಡಬೇಕು ಎನ್ನುವ ವಿಚಾರ ೧೯೭೪ ನೇ ಇಸವಿಯಲ್ಲಿ ನಡೆದಿದೆ. ಆದಾದಮೇಲೆ ಇವನ್ನು ಸ್ವಲ್ಪ ಪ್ರಗತಿಪರವಾಗಿ ಮಾಡಬೇಕು ಎನ್ನುವ ಉದ್ದೇಶವನ್ನು ಸರ್ಕಾರ ಇಟ್ಟುಕೊಂಡಿತ್ತು. ಆದ್ದರಿಂದ ಅದನ್ನು ಇತ್ತೀಚೆಗೆ ಸಾಧ್ಯವಾದಷ್ಟು, ಆದರಲ್ಲೂ ಕೂಡ ಇದನ್ನು ಒಂದು ಲಾಭದ ಮನೋಭಾವದಿಂದ ನೋಡುವುದಕ್ಕಾಗುವುದಿಲ್ಲವೆಂದು, ಹೆಚ್ಚಿನ ರೀತಿಯಲ್ಲಿ ಆದಕ್ಕೆ ರೋಗಗಳು ಬಂದಾಗ ಅದನ್ನು ತಡೆಗಟ್ಟುವುದಕ್ಕಾಗುವುದಿಲ್ಲವೆಂದು ಇದರ ವ್ಯವಹಾರಗಳೆಲ್ಲವೂ ಕಮರ್ಶಿಯಲ್ ಬೇಸಿಸ್ ಮೇಲೆ ನಡೆಯುತ್ತವೆಂದು ಇದನ್ನು ಸರ್ಕಾರದ ಹತೋಟಿಯಲ್ಲಿ ಇಟ್ಟುಕೊಳ್ಳಬೇಕೆಂದು ತಮ್ಮ ತೀರ್ಮಾನವನ್ನು ಇದರ ಬಗ್ಗೆ ಜಪಾನಿನ ಮುಜಾರ್ ಮತ್ತು ಡಾಕ್ಟರ್ ಮಾನೋ ಅವರು ಒಂದು ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಆದ್ದರಿಂದ ಇದಕ್ಕೆ ಒಂದು ಕಾರ್ಪೊರೇಷನ್ ಮಾಡಿ ಅವರ ಒಂದು ಹತೋಟಿಯಲ್ಲಿ ಬಿಟ್ಟರೆ ಸರಿಯಾಗಿ ನಡೆಯುವುದಿಲ್ಲ ಎನ್ನುವ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ವಿಶ್ವಬ್ಯಾಂಕಿನಿಂದ ಎಕ್ಸ್‌ಪರ್ಟ್‌ಗಳು ಬಂದು ಒಂದೂ ಒಂದೂವರೆ ವರ್ಷ ಇದರ ಆಡಳಿತವನ್ನು ಸರ್ಕಾರದವರು ನಡೆಸಬೇಕೆಂದು ಅಭಿಪ್ರಾಯ ಕೊಟ್ಟಿದ್ದಾರೆ. ಈಗ ಗ್ರೇನೇಜ್‌ಗಳನ್ನು ಸರ್ಕಾರದ ಹತೋಟಿಯಲ್ಲಿ ನಡೆಸಿದರೆ ಹೆಚ್ಚಿನ ರೀತಿಯಲ್ಲಿ ಸೇವೆಯನ್ನು ಮಾಡುವುದಕ್ಕೆ ಸಾಧ್ಯ ಎಂದು ಹೇಳಿದ್ದಾರೆ. ಆದ್ದರಿಂದ ಈಗಾಗಲೇ ಮಾಡಲ್ ಗ್ರೇನೇಜುಗಳನ್ನು ಮದ್ದೂರು, ಪಾಂಡವಪುರ, ಸಿಡಲಗಟ್ಟ ಹಾಗೂ ತಲಗಟ್ಟಪುರಿ ಈ ನಾಲ್ಕು ಕಡೆ ಮಾಡಬೇಕೆಂದು ಉದ್ದೇಶವನ್ನು ಇಟ್ಟುಕೊಂಡಿದ್ದೇವೆ. ಈ ನಾಲ್ಕು ಕಡೆಗಳಲ್ಲಿಯೂ ಸುಮಾರು ಒಂದು ಒಂದೂವರೆ ಕೋಟಿ ಮೊಟ್ಟೆಗಳನ್ನು ತಯಾರು ಮಾಡಬೇಕೆಂದು ಉದ್ದೇಶವನ್ನು ಇಟ್ಟುಕೊಂಡಿದ್ದೇವೆ. ಈಗ ೬ಳಿ ಸರ್ಕಾರದ ಗ್ರೇನೇಜುಗಳು ಇವೆ. ಅದರಲ್ಲಿ ೧೯೭೪–೭೫ನೇ ಸಾಲಿನಲ್ಲಿ ೧೫ ಕೋಟಿ ಮೊಟ್ಟೆಗಳನ್ನು ನಾವು ಹಂಚಿದ್ದೇವೆ. ೧೯೭೮–೭೯ರಲ್ಲಿ ೪ ಕೋಟಿ ಮೊಟ್ಟೆಗಳನ್ನು ಹಂಚಿದ್ದೇವೆ. ಈವರ್ಷ ಎಂದರೆ ೧೯೭೯–೮೦ರಲ್ಲಿ ೮ ಕೋಟಿ ಮೊಟ್ಟೆಗಳನ್ನು ಹಂಚಬೇಕೆಂದು ಸರ್ಕಾರ